



# ಗುರು ಸಂಜೀವರ ಸಿನಿಮಾ ಪ್ರವೇಶ

ಬನ್ನಂಜೆ ಸಂಜೀವ ಸುವರ್ಣ ಅವರದು ಯಕ್ಷಗಾನ ಪ್ರಪಂಚದಲ್ಲಿ ದೊಡ್ಡ ಹೆಸರು. ಯಕ್ಷಗೆಜ್ಜೆ ಕಟ್ಟಿಕೊಂಡು ಐವತ್ತಕ್ಕೂ ಹೆಚ್ಚು ದೇಶಗಳಲ್ಲಿ ಪ್ರತಿಭಾವಿಲಾಸ ಪ್ರದರ್ಶಿಸಿ ಬಂದ ಇವರು, ಗುರುಕುಲ ಮಾದರಿಯ ಯಕ್ಷಗಾನ ಶಾಲೆಯನ್ನೂ ನಡೆಸುತ್ತಿದ್ದಾರೆ.

ಯಕ್ಷಲೋಕದ ಗಾಳಿಗಂಧವನ್ನೇ ಉಸಿರಾಡುತ್ತಿರುವ ಇವರು ಈಗ ಸಿನಿಮಾದಲ್ಲಿಯೂ ನಟಿಸಿದ್ದಾರೆ. ಸಂಜೀವರು ನಟಿಸಿರುವ ಸಿನಿಮಾ ಹೆಸರು 'ಸುಗಂಧಮಯ'. ಜಿ. ಮೂರ್ತಿ ನಿರ್ದೇಶನ ಮಾಡಿರುವ ಈ ಚಿತ್ರದ ಮುಖ್ಯಭೂಮಿಕೆಯಲ್ಲಿಯೂ ಯಕ್ಷಗಾನದ ಭಿತ್ತಿಯೇ ಇದೆ. ಯಕ್ಷಗಾನ ಕಲೆಯನ್ನು ಹೊಸ ಹೊಸ ಪ್ರಯೋಗಗಳ ಮೂಲಕ ವಿಸ್ತರಿಸಿದ ಹಿರಿಯ ಸಾಹಿತಿ ಶಿವರಾಮ ಕಾರಂತರಿಗೆ ಈ ಸಿನಿಮಾವನ್ನು ಅರ್ಪಿಸಲಾಗಿದೆ.

ಪುಟಾಣಿ ಹುಡುಗಿಯೊಬ್ಬಳು ಯಕ್ಷಗಾನ ಕಲಿತು ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡುವ ಕಥೆಯನ್ನು ಹೊಂದಿರುವ ಈ ಸಿನಿಮಾದಲ್ಲಿ ಸಂಜೀವ ಸುವರ್ಣರು ಯಕ್ಷಗಾನ ಕಲಿಸುವ ಗುರುಗಳ ಪಾತ್ರದಲ್ಲಿ ನಟಿಸಿದ್ದಾರೆ. ಯಕ್ಷಗಾನ ಕಲಿಯುವ ಹುಡುಗಿಯ ಪಾತ್ರದಲ್ಲಿ ವೈಷ್ಣವಿ ಎಂಬ ಹುಡುಗಿ ನಟಿಸಿದ್ದಾರೆ. ಅವರ ತಾಯಿಯಾಗಿ ವಿನಯಾ ಪ್ರಸಾದ್ ಕಾಣಿಸಿಕೊಂಡಿರುವುದು ವಿಶೇಷ.

ನರೇಂದ್ರಕುಮಾರ್ ಅವರು ಈ ಚಿತ್ರಕ್ಕೆ ಹಣ ಹೂಡಿದ್ದಾರೆ. ಪ್ರವೀಣ್ ಗೋಡ್ಖಿಂಡಿ ಸಂಗೀತ, ಸಂಜೀವ ರೆಡ್ಡಿ ಸಂಕಲನ ಚಿತ್ರಕ್ಕಿದೆ.

# ಗೆಲುವಿನ ಹಂಬಲದಲ್ಲಿ ರಂಜನಿ

ರಂಜನಿ ರಾಘವನ್. ಹೀಗೆಂದರೆ ಯಾರಿಗೂ ಈ ಹುಡುಗಿಯ ಪರಿಚಯ ಆಗುವುದಿಲ್ಲ. ಬದಲಿಗೆ 'ಪುಟ್ಟ ಗೌರಿ ಮದುವೆ' ಸೀರಿಯಲ್‌ನ ಗೌರಿ ಎಂದರೆ ಪಕ್ಕನೇ 'ಹಾ ಅವಳು' ಎಂಬ ಉದ್ಗಾರ ಹೊರಡುತ್ತದೆ.

ಕಿರುತೆರೆಯ ಮೂಲಕ ಮನೆಮಾತಾಗಿದ್ದ ಪುಟ್‌ಗೌರಿ ಹಿರಿತೆರೆಯ ಮೆಟ್ಟಿಲು ಏರಿದ್ದು 2017ರಲ್ಲಿ 'ರಾಜಹಂಸ' ಸಿನಿಮಾದ ಮೂಲಕ. 'ರಾಜಹಂಸ' ಅವರಿಗೆ ಬೆಳ್ಳಿತೆರೆಯಲ್ಲಿ ಅದೃಷ್ಟದ ಫಲವನ್ನೇನೂ ಕೊಡಲಿಲ್ಲ. ಹಾಗಂತ ಅವರು ಹಿಂದಡಿ ಇಟ್ಟಿಲ್ಲ. 'ಟಕ್ಕರ್' ಮೂಲಕ ಅವರು ಮತ್ತೆ ದೊಡ್ಡಪರದೆಯ ಮೇಲೆ ಮುಖತೋರಿಸಲು ಸಜ್ಜಾಗಿದ್ದಾರೆ.

ವಿ. ರಘುಶಾಸ್ತ್ರಿ ಆ್ಯಕ್ಷನ್ ಕಟ್ ಹೇಳಿರುವ ಈ ಚಿತ್ರದ ಟೀಸರ್ ನೋಡಿದರೆ ರಗಡ್ ಶೈಲಿಯ ಚಿತ್ರ ಎಂಬುದು ಗೊತ್ತಾಗುತ್ತದೆ. ಆಕ್ಷನ್ ಮೇಲಾಟದಲ್ಲಿ ನಯವಾಗಿ ಸೋಕುವ ತಂಗಾಳಿಯಂಥ ಹುಡುಗಿಯಾಗಿ ರಂಜನಿ ನಾಯಕನಿಗೆ ಟಕ್ಕರ್ ನೀಡಲಿದ್ದಾರಂತೆ.

ಈ ಚಿತ್ರದ ನಾಯಕ ಮನೋಜ್, ನಟ ದರ್ಶನ್ ಅವರ ಸಂಬಂಧಿಯೂ ಹೌದು. ಹಾಗಾಗಿ ದರ್ಶನ್ ಕೈಯಲ್ಲೇ ಚಿತ್ರದ ಆಡಿಯೊ ಬಿಡುಗಡೆ ಮಾಡಿಸುವ ಸಿದ್ಧತೆಯನ್ನೂ ಚಿತ್ರರಂಗ ನಡೆಸಿದೆ. ಈಗಾಗಲೇ ರಿಲೀಸ್ ಆಗಿರುವ ಟೀಸರ್‌ಗೂ ಡಿ ಬಾಸ್ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಕಿರುತೆರೆಯಲ್ಲಿ ಜನಪ್ರಿಯತೆಯ ಅಲೆಯಲ್ಲಿ ತೇಲಿದ್ದ ರಂಜನಿ ಹಿರಿತೆರೆಗೂ ಅದೇ ಮಹತ್ವಾಕಾಂಕ್ಷೆಯಲ್ಲಿ ಕಾಲಿಟ್ಟವರು. ಮೊದಲ ಹೆಜ್ಜೆಯಲ್ಲಿ ಯಶಸ್ಸಿನ ರುಚಿ ಸಿಕ್ಕದಿದ್ದರೂ 'ಟಕ್ಕರ್' ಮೂಲಕ ಗೆದ್ದೇ ಗೆಲ್ಲುವೆ ಎನ್ನುವ ನಂಬಿಕೆಯಲ್ಲಿ ಅವರು ಚಿತ್ರದ ಬಿಡುಗಡೆಗಾಗಿ ಕಾಯುತ್ತಿದ್ದಾರೆ.

ಚಿತ್ರ: ಕೆ.ಎನ್. ನಾಗೇಶ್‌ಕುಮಾರ್